O.S. ನಂಬರಃ 47/2017

ಪಿ. ಡಬ್ಲ್ಯೂಃ 2

ದಿಃ 24-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ 1ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಸ್.ಯು.ಎ ಇವರಿಂದಃ

ನೀವು ಬೆಳಂಬಾರ ಹಾಗೂ ಹೊನ್ನೆಬೈಲ್ ಗ್ರಾಮ ಪಂಚಾಯತಿಯಲ್ಲಿ ಗುತ್ತಿಗೆದಾರರಾಗಿ ಕೆಲಸ ಮಾಡುತ್ತೀರಿ ಎಂದರೆ ಸರಿ. ಹಾಗೂ ಪಿ ಡಬ್ಲ್ಯೂ ಡಿ ಗುತ್ತಿಗೆ ಕೆಲಸವನ್ನೂ ಸಹ ಮಾಡುತ್ತೀರಿ ಎಂದರೆ ಸರಿಯಲ್ಲ. ಗ್ರಾಮ ಪಂಚಾಯತಿ ಕೆಲಸ ಮಾಡುವಾಗ ನಿಮ್ಮ ಕೆಳಗಿನ ಕೆಲಸಗಾರರು ನಿಮ್ಮ ಮಾತನ್ನು ಕೇಳುತ್ತಾರೆ ಎಂದರೆ ಸಾಕ್ಷಿಯು ನಾನೇ ಕೆಲಸಗಾರ ಆಗಿರುತ್ತೇನೆ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುವಾಗ ನಿಮ್ಮ ಜೊತೆಗೆ ಎಷ್ಟು ಜನ ಕೆಲಸಗಾರರು ಇರುತ್ತಾರೆ ಎಂದರೆ ಸಾಕಷ್ಟು ಜನರು ಇರುತ್ತಾರೆ ಎಂದು ನುಡಿಯುತ್ತಾರೆ. ಕೆಲಸ ಮಾಡುವ ಜನರಿಗೆ ನೀವೇ ಪಗಾರರವನ್ನು ಕೊಡುತ್ತೀರಿ ಎಂದರೆ ಸಾಕ್ಷಿಯು ಪಂಚಾಯತಿಯವರು ಕೊಡುತ್ತಾರೆ ಎಂದು ನುಡಿಯುತ್ತಾರೆ. ನೀವು ಇಲ್ಲಿಯವರೆಗೆ ಪಂಚಾಯತಿ ಕೆಲಸವನ್ನು ಎಲ್ಲೆಲ್ಲಿ ಮಾಡಿರುತ್ತೀರಿ ಎಂದು ಹೇಳಲು ಎಂದರೆ ಸಾಕ್ಷಿಯು ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಇದೇ ದಾವಾಕ್ಕೆ ಸಂಬಂಧಪಟ್ಟು ಇನ್ನೊಂದು ಮೂಲ ದಾವಾ ನಂ.45/2017 ರಲ್ಲಿ ನೀವು ಸಾಕ್ಷಿಯನ್ನು ನುಡಿಯುವ ಸಂದರ್ಭದಲ್ಲಿ

ನಿಮ್ಮ ತಮ್ಮ ರಾಜು ಇವರು ವಿಷ ಕುಡಿದುಕೊಂಡು ಮರಣಪಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತೀರಿ ಎಂದರೆ ಸರಿ. ನಿಮ್ಮ ತಮ್ಮ ವಿಷ ಕುಡಿದು ಸತ್ತಿದ್ದರಿಂದ ಯಾವುದೇ ಪೊಲೀಸ ಕಂಪ್ಲೇಂಟ್ ಮಾಡಿರುವುದಿಲ್ಲ ಎಂದರೆ ಸರಿ. ನಿಮ್ಮ ತಮ್ಮ ರಾಜು ಒಂದು ಹುಡುಗಿಯನ್ನು ಪ್ರೀತಿ ಮಾಡುತ್ತಿದ್ದು, ಆ ವಿಷಯ ನಿಮಗೆ ಗೊತ್ತಾಗಿ ನೀವೇ ಅವರನ್ನು ಹೊಡೆದಿದ್ದರಿಂದ ಮರಣಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆತನು ಪ್ರೀತಿ ಮಾಡುವ ವಿಷಯ ನನಗೆ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಈಗ ನಿಮ್ಮ ತಾಯಿ ಎಲ್ಲಿ ಇರುತ್ತಾರೆ ಎಂದರೆ ಮನೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಜೊತೆಗೆ ಇರುತ್ತಾರೆ. ನಿಮ್ಮ ತಾಯಿ ಸ್ವಲ್ಪ ಮಾನಸಿಕ ಅಸ್ವಸ್ಥೆ ಎಂದರೆ ಸರಿಯಲ್ಲ. ನಿಮ್ಮ ತಮ್ಮ ಮರಣಪಟ್ಟ ನಂತರ ಹೆದರಿಕೊಂಡು ನಿಮ್ಮಜೊತೆಗೆ ಇರುವುದಿಲ್ಲ ಎಂದು ಬೇರೆ ಮನೆ ಮಾಡಿಕೊಂಡು ವಾಸ್ತವ್ಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಮ್ಮನ ಮರಣವನ್ನು ಮುಚ್ಚಿ ಹಾಕಲು ಇಂದು ನಿಮ್ಮ ಜೊತೆಗೆ ಬಂದಿರುವ ಆನಂದು ಎಂಬುವವರೂ ಸಹ ಸಹಕಾರ ಕೊಟ್ಟಿದ್ದರು ಎಂದರೆ ಸರಿಯಲ್ಲ.

2. ವಾದಿಯರು ಹೇಳಿದ್ದರಿಂದ ಇಂದು ನೀವು ನ್ಯಾಯಾಲಯಕ್ಕೆ ಬಂದಿರುತ್ತೀರಿ ಎಂದರೆ ಸರಿ. ನ್ಯಾಯಾಲಯಕ್ಕೆ ಬರುವ ಮುನ್ನ ವಾದಿಯರು ಮತ್ತು ವಕೀಲರ ಹತ್ತಿರ ಚರ್ಚೆ ಮಾಡಿಕೊಂಡು ಬಂದಿರುತ್ತೀರಿ ಎಂದರೆ ಸರಿಯಲ್ಲ. ನೀವು ಹಾಗೂ ವಾದಿಯರು ಆತ್ಮೀಯ ಸಂಬಂಧಿಕರು ಎಂದರೆ ಸರಿ. ಇಂದು ನೀವು ಹಾಗೂ ಆನಂದು ಇವರು ಒಟ್ಟಿಗೆ ಬಂದಿರುತ್ತೀರಿ ಎಂದರೆ ಸರಿ.

3. ನಿಮಗೆ ಈ ದಾವೆಯಲ್ಲಿ ಸಂಬಂಧಪಟ್ಟ ಆಸ್ತಿಯ ಸರ್ವೆ ನಂಬರ್ ಗೊತ್ತಾ ಎಂದರೆ ಸರ್ವೆ ನಂಬರ್ ಗೊತ್ತಿರುವುದಿಲ್ಲ, ಆದರೆ ವಾದಿಯರು ಸಾಗುವಳಿ ಮಾಡುತ್ತಿರುವುದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಈ ವರ್ಷ ಏನು ಸಾಗುವಳಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಭತ್ತ ಬೆಳೆದಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ರೀತಿಯ ಭತ್ತ ಎಂದರೆ ಸಾಕ್ಷಿಯು ಜಯಾ ಭತ್ತ ಎಂದು ನುಡಿಯುತ್ತಾರೆ.

4. ದಾವಾ ಆಸ್ತಿಯ ಜಮೀನು ಈಗ 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು ಗೊತ್ತಾ ಎಂದರೆ ಸಾಕ್ಷಿಯು ವಾದಿಯ ತಾಯಿ ಹಾಗೂ ಅವರ ಅಕ್ಕನ ಹೆಸರಿನಲ್ಲಿ ಇದ್ದು, ಅವರು ಮರಣ ಪಟ್ಟ ನಂತರ ವಾದಿಯರ ಹೆಸರನ್ನು ದಾಖಲಾತಿಗಳಲ್ಲಿ ಹಚ್ಚಿಸಲು 1ನೇ ಪ್ರತಿವಾದಿಗೆ ಕೊಟ್ಟಿದ್ದು, ಆದರೆ 1ನೇ ಪ್ರತಿವಾದಿಯು ತನ್ನ ಹೆಸರನ್ನು ಹಚ್ಚಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾಖಲೆಗಳನ್ನು ನೀವು ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 3 ನೇ ವಾದಿಯ ಗಂಡನ ಮನೆಯ ಆಸ್ತಿಯು ದಾವಾ ಆಸ್ತಿಯ ವಾರಸಾ ಆಗುವ ಮುಂಚೆಯೇ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಆಕೆಯ ಗಂಡನ ಮನೆಯ ಆಸ್ತಿಯ ಬಗ್ಗೆ ಮಾಹಿತಿ ಇರುವುದಿಲ್ಲ. ಅದೇ ರೀತಿ ಉಳಿದ ವಾದಿಯರ ಗಂಡನ ಮನೆಯ ಆಸ್ತಿಗಳ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನೀವು ವಾದಿಯರಿಗೆ ಹೇಗಾದರೂ ಮಾಡಿ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ 2 ನೇ ಪ್ರತಿವಾದಿಯು ದುಡ್ಡು ಕೊಟ್ಟು ಖರೀದಿ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಮ್ಮ ಸಮುದಾಯದವರೂ ಆಗಿರುವುದಿಲ್ಲ

ಹಾಗೂ ನಿಮಗೆ ಯಾವುದೇ ರೀತಿಯ ಸಂಬಂಧಿಕರು ಆಗಿರುವುದಿಲ್ಲ ಎಂದರೆ ಸರಿ. ಇನ್ನೊಬ್ಬ ಸಾಕ್ಷಿದಾರ ಏನಾಗಬೇಕು ಎಂದರೆ ಪರಿಚಯವಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿಯು 15-20 ವರ್ಷಗಳಿಂದ ಪರಿಚಯ ಎಂದು ನುಡಿಯುತ್ತಾರೆ.

5. ತುಕಾರಾಮ ಗೌಡ ಯಾನೆ ಗಾಂವಕರ ಇವರ ಆಸ್ತಿ ಎಲ್ಲಿ ಇದೆ ಎಂದು ನಿಮಗೆ ಏನಾದರೂ ಗೊತ್ತಾ ಎಂದರೆ ಸಾಕ್ಷಿಯು ದಾವಾ ಜಮೀನಿನ ಲಗ್ತ ಇರುತ್ತದೆ ಎಂದು ನುಡಿಯುತ್ತಾರೆ. ತುಕಾರಾಮ ಗೌಡ ಯಾನೆ ಗಾಂವಕರ ಹಾಗೂ ದಾವಾ ಆಸ್ತಿಯನ್ನು ಪ್ರತಿವಾದಿಯರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನೀವು ಹೇಳಿದ ಜಯಾ ಭತ್ತವನ್ನು ಪ್ರತಿವಾದಿಯರೇ ಬಿತ್ತನೆ ಮಾಡಿದ್ದು, ವಾದಿಯರು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2ನೇ ಪ್ರತಿವಾದಿಯ ಪರ ವಕೀಲರು ಮೇಲಿನ ಪಾಟಿ ಸವಾಲನ್ನೆ ಅಳವಡಿಸಿಕೊಳ್ಳಲು ಕೋರಿಕೊಂಡಿದ್ದು, ಅದರಂತೆ ಅಳವಡಿಸಿಕೊಳ್ಳಲಾಯಿತು.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.